ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆ ಇಲಾಖೆ)

ಸಂ:ವಾತೆಜಂಆ(ಆ):/ಶಿ:ರ: /11-12.

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರವರ ಕಛೇರಿ
(ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ,
ಸುವರ್ಣ ಕರ್ನಾಟಕ ವಾಣಿಜ್ಯ ತೆರಿಗೆ ಭವನ,
ಗೋಪಾಲಗೌಡ ಬಡಾವಣೆ, ಶಿವಮೊಗ್ಗ,
ಶಿವಮೊಗ್ಗ, ದಿನಾಂಕ:30-01-2012.
ಫೋನ್: 08182-258706/258707
258705 ಫ್ಯಾಕ್ಸ್

## :: ಟೆಂಡರ್ ಪ್ರಕಟಣೆ ::

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು(ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, ಮಲೆನಾಡು ವಿಭಾಗ, ಶಿವಮೊಗ್ಗ ಇವರು ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು(ಕರ್ನಾಟಕ), ಬೆಂಗಳೂರು ಇವರ ನಿರ್ದೇಶನದಂತೆ ಕಛೇರಿ ಕಟ್ಟಡಕ್ಕೆ ಹಾಗೂ ಮಲೆನಾಡು ವಿಭಾಗದಲ್ಲಿನ ವಿವಿಧ ಕಛೇರಿಗಳ ಕಟ್ಟಡಕ್ಕೆ ವಿದ್ಯುತ್‌ಜನಕ(D.G.sets) ಗಳ ಸರಬರಾಜು, ಪ್ರತಿಷ್ಠಾಪನೆ, ಪರೀಕ್ಷಣೆ ಹಾಗೂ ವಾರ್ಷಿಕ ನಿರ್ವಹಣೆಯನ್ನು ನಿರ್ವಹಿಸಲು ಆಸಕ್ತ ಬಿಡ್ಡುದಾರರಿಂದ ಬಿಡ್ಡುಗಳನ್ನು ಆಹ್ವಾನಿಸಲಾಗಿದೆ. ವಿದ್ಯುತ್‌ಜನಕಗಳ ಪ್ರತಿಷ್ಟಾಪನೆಗೆ ಉದ್ದೇಶಿಸಿರುವ ಕಟ್ಟಡದ ಸ್ಥಳ ಹಾಗೂ ವಿದ್ಯುತ್‌ಜನಕಗಳ ಸಾಮರ್ಥ್ಯದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಪ್ರತಿಷ್ಟಾಪಿಸಲು ಉದ್ದೇಶಿಸಿರುವ ಕಛೇರಿಯ ವಿಳಾಸ | ಸಾಮರ್ಥ್ಯದ ವಿವರ |
|---|---|---|
| 1 | ಸುವರ್ಣ ಕನಾಟಕ ವಾಣಿಜ್ಯ ತೆರಿಗೆ ಭವನ,ಗೋಪಾಲಗೌಡ ಬಡಾವಣೆ, ಶಿವಮೊಗ್ಗ | 25 ಕೆ.ವಿ.ಎ. |
| 2 | ವಾಣಿಜ್ಯ ತೆರಿಗೆ ಕಛೇರಿ, ಸಿದ್ದಾರೂಢನಗರ, ಭದ್ರಾವತಿ | 7.5 ಕೆ.ವಿ.ಎ. |
| 3 | ವಾಣಿಜ್ಯ ತೆರಿಗೆ ಭವನ, ಕಾಗೋಡು ತಿಮ್ಮಪ್ಪ ಬಡಾವಣೆ,ಸಾಗರ | 7.5 ಕೆ.ವಿ.ಎ. |
| 4 | ವಾಣಿಜ್ಯ ತೆರಿಗೆ ಭವನ, ಕೆ.ಎಂ.ರಸ್ತೆ, ಚಿಕ್ಕಮಗಳೂರು | 15 ಕೆ.ವಿ.ಎ. |
| 5 | ವಾಣಿಜ್ಯ ತೆರಿಗೆ ಕಛೇರಿ, ಕೋರ್ಟ್ ಎದುರು, ಬಿ.ಹೆಚ್.ರಸ್ತೆ, ಅರಸೀಕೆರೆ | 7.5 ಕೆ.ವಿ.ಎ. |
| 6 | ವಾಣಿಜ್ಯ ತೆರಿಗೆ ಭವನ, ಬಿ.ಹೆಚ್.ರಸ್ತೆ, ತರೀಕೆರೆ | 7.5 ಕೆ.ವಿ.ಎ. |
| 7 | ವಾಣಿಜ್ಯ ತೆರಿಗೆ ಕಛೇರಿ, ಶಾರದಾ ಸಮುದಾಯ ಭವನ, ಶಂಕರಮಠ ರಸ್ತೆ, ಹಾಸನ | 15 ಕೆ.ವಿ.ಎ. |

## ಷರತ್ತುಗಳು:-

1) ಮೇಲ್ಕಂಡಂತೆ ಪ್ರತಿಷ್ಠಾಪಿಸಲು ಉದ್ದೇಶಿಸಿರುವ ವಿದ್ಯುತ್‌ಜನಕಗಳ ಕಟ್ಟಡಗಳ ಸ್ಥಳಗಳಲ್ಲಿ, ವಿದ್ಯುತ್‌ಜನಕಗಳ ಪ್ರತಿಷ್ಠಾಪನ ಜಾಗದಿಂದ ಕಟ್ಟಡದ ಒಳಗಿನ ಸ್ವಿಚ್ ಬೋರ್ಡ್‌ವರೆಗಿನ ಅಂತರಗಳ ವಿವರ ಸಂಬಂಧಿಸಿದ ಕಛೇರಿಗಳಲ್ಲಿ ಕಛೇರಿಯ ಸಮಯದಲ್ಲಿ ಪಡೆಯಬಹುದಾಗಿದೆ.

2) ಆಸಕ್ತ ಬಿಡ್ಡುದಾರರು ಈ ಮೇಲ್ಕಂಡ ಐ.ಎಸ್.ಓ. ಪ್ರಮಾಣಪತ್ರ ಹೊಂದಿರುವ ಅತ್ಯುತ್ತಮ ಗುಣಮಟ್ಟದ ವಿದ್ಯುತ್‌ಜನಕಗಳ ಸರಬರಾಜು, ಪ್ರತಿಷ್ಠಾಪನೆ, ಪರೀಕ್ಷಣೆಗೊಳಪಟ್ಟು ಹಾಗೂ ವಾರ್ಷಿಕ ನಿರ್ವಹಣೆಯನ್ನು ಒಳಗೊಂಡ ಸಂಯುಕ್ತ ಬಿಡ್ಡುಗಳನ್ನು ಸಲ್ಲಿಸಲು ಸೂಚಿಸಲಾಗಿದೆ. ಹಾಗೂ ವಾರಂಟಿ ಅವಧಿಯನ್ನು, ವಿದ್ಯುತ್‌ಜನಕಗಳ ಉತ್ಪಾದಕೆ ಕಂಪನಿ ವಿವರಗಳು ಮತ್ತಿತರ ತಾಂತ್ರಿಕ ಅಂಶಗಳನ್ನು ಒಳಗೊಂಡಂತೆ ಬಿಡ್‌ಗಳಲ್ಲಿ ಕಡ್ಡಾಯವಾಗಿ ನಮೂದಿಸಲು ಸೂಚಿಸಲಾಗಿದೆ.

3) ಮೇಲ್ಕಂಡಂತೆ ಆಸಕ್ತ ಬಿಡ್ಡುಗಳನ್ನು ಸಲ್ಲಿಸಲು ದಿನಾಂಕ:13-02-2012 ರ ಸಾಯಂಕಾಲ 4.30 ರೊಳಗೆ ಸಮಯಾವಕಾಶವನ್ನು ನೀಡಲಾಗಿದೆ. ಆಸಕ್ತರು ತಮ್ಮ ಬಿಡ್ಡುಗಳನ್ನು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು(ಆಡಳಿತ), ಡಿ.ವಿ.ಓ. ಮಲೆನಾಡು ವಿಭಾಗ, ಶಿವಮೊಗ್ಗ ಅಥವಾ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು(ಕೇಂದ್ರ ಕಛೇರಿ), ಮೌಲ್ಯವರ್ಧಿತ ತೆರಿಗೆ ವಿಭಾಗ, ಶಿವಮೊಗ್ಗ ಇವರಿಗೆ ನೇರವಾಗಿ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿ ಇದಕ್ಕೆ ಅಧಿಕೃತ ಸ್ವೀಕೃತಿಯನ್ನು ಪಡೆದುಕೊಳ್ಳಲು ಸೂಚಿಸಲಾಗಿದೆ.

4) ದಿನಾಂಕ:15-02-2012 ರಂದು ಬೆಳಗ್ಗೆ 11.30 ಕ್ಕೆ ಮುಚ್ಚಿದ ಲಕೋಟೆಗಳಲ್ಲಿ ಸಲ್ಲಿಸಿದ ಬಿಡ್ಡುಗಳನ್ನು ತೆರೆದು ಬಿಡ್ಡುಗಳ ವಿವರ ಹಾಗೂ ತಾಂತ್ರಿಕ ಅಂಶಗಳು ಹಾಗೂ ಅತಿ ಕಡಿಮೆ ಮತ್ತು ಘೋಷಿಸಿರುವ ಬಿಡ್ಡುಗಳ ವಿವರಗಳನ್ನು ಬಿಡ್ಡುದಾರರು/ಪ್ರತಿನಿಧಿಗಳ ಸಮ್ಮುಖದಲ್ಲಿ ಪರಿಶೀಲಿಸಿ ಯಶಸ್ವಿ ಬಿಡ್ಡುದಾರರ ಹೆಸರನ್ನು ಘೋಷಿಸಲಾಗುವುದು. ಆದ್ದರಿಂದ ಮೇಲ್ಕಂಡ ಬಿಡ್ಡು ಪ್ರಕ್ರಿಯೆಯಲ್ಲಿ ಭಾಗವಹಿಸುವ ಎಲ್ಲಾ ಆಸಕ್ತರು ತಮ್ಮ ಪ್ರತಿನಿಧಿಗಳು ಬಿಡ್ಡುಗಳನ್ನು ಪರಿಶೀಲಿಸುವ ದಿನಾಂಕದಂದು ತಪ್ಪದೇ ಹಾಜರಿರಲು ಸೂಚಿಸಲಾಗಿದೆ.

5) <u>Technical Details:</u>

Capacity: a) Engine capacity:

If the 25 KVA D.G. sets are not available, the quotation may please be submitted for 30 KVA & only one no. is required to be installed at Shimoga either 25 KVA/30 KVA.. 15 KVA D.G. set one no. required at Hassan & one no. 15 KVA D.G. Set at Chikmagalur. 7.5 KVA D.G. set each at Sagar, Bhadravathi, Tarikere & Arasikere.

| | |
|---|---|
| b) Engine make | :ISO certified company- Name/Model. |
| c) Alternator | :ISO certified company-Name/Model. |
| d) Cooling system | : Air cooled. |
| e) Phases | : 3 phase for 25/30 KVA, 1 phase for 7.5 KVA & 15 KVA each. |
| f) Voltage | : In volts 240 rated. |

6) ದಿನಾಂಕ: 15-02-2012 ರಂದು ಯಶಸ್ವಿ ಬಿಡ್ಡುದಾರರನ್ನು ಘೋಷಿಸಿದ ಕೂಡಲೇ ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರವರಿಂದ ಅನುಮತಿ ಪಡೆದ ತಕ್ಷಣ ಯಶಸ್ವಿ ಬಿಡ್ಡುದಾರರಿಗೆ ಲಿಖಿತ ಆದೇಶಗಳನ್ನು ನೀಡಲಾಗುವುದು ಹಾಗೂ 15 ದಿನಗಳೊಳಗಾಗಿ ವಿದ್ಯುತ್‌ಜನಕಗಳ ಸರಬರಾಜು, ಪ್ರತಿಷ್ಠಾಪನೆ, ಪರೀಕ್ಷಣೆಗಳನ್ನು ಪೂರ್ಣಗೊಳಿಸಲು ಸೂಚಿಸಲಾಗುವುದು.

7) ವಿದ್ಯುತ್ ಜನಕಗಳ ಸರಬರಾಜು, ಪ್ರತಿಷ್ಠಾಪನೆ, ಪರಿವೀಕ್ಷಣೆ ಮುಗಿದ ನಂತರ ಕೂಡಲೇ ಹಣ ಪಾವತಿ ಮಾಡಲಾಗುವುದು.

8) ವಿದ್ಯುತ್ ಜನಕಗಳ ಸರಬರಾಜು ಹಾಗೂ ಪ್ರತಿಷ್ಠಾಪನೆಯಲ್ಲಿ ಕರ್ನಾಟಕ ವಾಯು ಮಾಲಿನ್ಯ ನಿಯಂತ್ರಣ ನಿಯಮಾವಳಿಗಳು ಹಾಗೂ ಕರ್ನಾಟಕ ವಿದ್ಯುತ್ ಪ್ರಸರಣ ನಿಯಮಾವಳಿಗಳು ಹಾಗೂ ನಿರ್ಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿರುತ್ತದೆ.

9) ಕ್ರಮಸಂಖ್ಯೆ:06 ರಲ್ಲಿ ತಿಳಿಸಿರುವಂತೆ ತಾಂತ್ರಿಕ ಅಂಶಗಳ ಪಟ್ಟಿಯನ್ನು ಒಳಗೊಂಡ ಸ್ವಯಂ ಅರ್ಜಿಯಲ್ಲಿ ಡಿ.ಜಿ.ಸೆಟ್‌ಗಳ ಪ್ರಮಾಣವಾರು ಒಟ್ಟು ಸರಬರಾಜು ಮೊತ್ತ (ಸ್ಥಳೀಯ ವ್ಯಾಟ್ ಮತ್ತಿತರ ಶಾಸನಬದ್ಧ ತೆರಿಗೆಗಳು ಸೇರಿಸಿ) ಪ್ರತಿಷ್ಠಾಪನೆಗೆ ತಗಲುವ ಸರಕುಗಳ ಹಾಗೂ ಸೇವೆಗಳ ಮೊತ್ತ ಹಾಗೂ ಕಂಪನಿಯು ನೀಡುವ ವಾರಂಟಿ ಅವಧಿ ನಂತರದ ವಾರ್ಷಿಕ ನಿರ್ವಹಣೆ ವಿವರಗಳನ್ನು ಸ್ವಯಂ ಅರ್ಜಿಯಲ್ಲಿ ಸಲ್ಲಿಸಲು ಸೂಚಿಸಲಾಗಿದೆ.

10) ಮೇಲ್ಕಂಡ ಬಿಡ್ಡುಗಳನ್ನು ಯಾವುದೇ ಕಾರಣವಿಲ್ಲದೆ ಬಿಡ್ಡು ಪ್ರಕ್ರಿಯೆಯನ್ನು ಮುಂದೂಡುವ ಹಾಗೂ ರದ್ದುಪಡಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಹೊಂದಿರುತ್ತಾರೆ.

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು(ಆಡಳಿತ),
ಮೌಲ್ಯ ವರ್ಧಿತ ತೆರಿಗೆ ವಿಭಾಗ, ಶಿವಮೊಗ್ಗ.

30/1/12